ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಅಧಿಕೃತ ಸಂಖ್ಯೆ (ಸಿಐಎನ್): ಯು40109ಕೆಎ1999ಎಸ್‌ಜಿಸಿ025521
**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

ವಿಷಯ: 2020-21 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕ ಮಂಜೂರು ಮಾಡುವ ಬಗ್ಗೆ.

*****

**ಓದಲಾಗಿದೆ:**

1. ಕರ್ನಾಟಕ ಸರ್ಕಾರ, ಕವಿಪ್ರನಿನಿ ಹಾಗೂ ಕವಿಪ್ರನಿ ನೌಕರರ ಸಂಘ (ನೋ.ಸಂ.659), ಕವಿಮಂ ಇಂಜಿನಿಯರ್‌ಗಳ ಸಂಘ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ಹಾಗೂ ಕವಿಮಂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ ಇವುಗಳ ನಡುವೆ ನಡೆದ ತ್ರಿಪಕ್ಷೀಯ ಒಪ್ಪಂದಗಳು.
2. ದಿನಾಂಕ: 01.04.2014 ರಿಂದ ಅನ್ವಯವಾಗುವಂತೆ ನೌಕರರ ಮಾಸಿಕ ಸಂಬಳ/ಮಜೂರಿಯನ್ನು ₹10,000/- ರಿಂದ ₹21,000/- ಕ್ಕೆ ಹಾಗೂ ಬೋನಸ್ ಗರಿಷ್ಠ ಮೊತ್ತವನ್ನು ₹3,500/- ರಿಂದ ₹7,000/- ಕ್ಕೆ ಹೆಚ್ಚಿಸಿ ಬೋನಸ್ ಆ್ಯಕ್ಟ್, 1965 ಗೆ ತಿದ್ದುಪಡಿಯನ್ನು ಮಾಡಿ ಹೊರಡಿಸಿರುವ ಭಾರತ ಸರ್ಕಾರದ ದಿನಾಂಕ: 01.01.2016 ರ ಆದೇಶ.
3. ದಿನಾಂಕ: 01.04.2014 ರಿಂದ ಅನ್ವಯವಾಗುವಂತೆ ಬೋನಸ್/ಅನುಗ್ರಹಪೂರ್ವಕವನ್ನು ಸಂದಾಯ ಮಾಡುವಾಗ ಲೆಕ್ಕಿಸಲು ನೌಕರರ ಮಾಸಿಕ ಸಂಬಳ/ಮಜೂರಿಯನ್ನು ₹10,000/- ರಿಂದ ₹21,000/- ಕ್ಕೆ ಹಾಗೂ ಬೋನಸ್/ಅನುಗ್ರಹ ಪೂರ್ವಕದ ಗರಿಷ್ಠ ಮೊತ್ತವನ್ನು ₹3,500/- ರಿಂದ ₹7,000/- ಕ್ಕೆ ಹೆಚ್ಚಿಸಿ ಹೊರಡಿಸಿರುವ ನಿಗಮದ ದಿನಾಂಕ: 04.04.2016 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5608/2000-01.
4. 2021 ರ ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ 2020-21 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡುವಂತೆ ಕೋರಿ ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659) ಇವರು ಬರೆದ ದಿನಾಂಕ: 03.07.2021 ರ ಪತ್ರ ಸಂಖ್ಯೆ: ಕವಿಪ್ರನಿನೌಸ/119/21-22.
5. 2020-21ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡಲು ಅನುಮೋದನೆಯನ್ನು ಕೋರಿ ದಿನಾಂಕ: 27.07.2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಬರೆದಿರುವ ಪತ್ರ.
6. ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ 2020-21ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡಲು ಸರ್ಕಾರವು ದಿನಾಂಕ: 04.09.2021 ರಂದು ನೀಡಿರುವ ಅನುಮೋದನೆ.
7. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ: 04.09.2021.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5608/2000-2001, ಬೆಂಗಳೂರು, ದಿನಾಂಕ:** 4 SEP 2021

ನಿಗಮದ/ಎಸ್ಕಾಂಗಳ ನೌಕರರು ಹಾಗೂ 2020-21 ನೇ ಸಾಲಿನಲ್ಲಿ ನಿವೃತ್ತಿಯಾದ ನೌಕರರಿಗೆ, 2020-21ನೇ ಹಣಕಾಸು ವರ್ಷದಲ್ಲಿ ಗಳಿಸಿರುವ ಸಂಬಳ/ಮಜೂರಿಯ (ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್, 1965 ರಲ್ಲಿ ವ್ಯಾಖ್ಯಾನಿಸಿರುವಂತೆ) 1/12 ನೇ ಭಾಗ (ಶೇ.8.33) ಅಥವಾ ₹100/-(ರೂಪಾಯಿ ಒಂದು ನೂರು ಮಾತ್ರ) ಇವೆರಡರಲ್ಲಿ ಯಾವುದು ಹೆಚ್ಚೋ, ಅಷ್ಟನ್ನು ₹7,000/- ಗಳ ಮಿತಿಗೊಳಪಟ್ಟು ಬೋನಸ್ ರೂಪದಲ್ಲಿ ಈ ಕೆಳಗಿನ ಹಾಗೂ ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್, 1965 ರಲ್ಲಿ ನಿರ್ದಿಷ್ಟಪಡಿಸಿರುವ ಇತರೆ ಷರತ್ತುಗಳಿಗೊಳಪಟ್ಟು ಸಂದಾಯ ಮಾಡಲು ನಿಗಮವು ಅನುಮೋದಿಸಿದೆ:

1. 2020-21 ನೇ ಹಣಕಾಸು ವರ್ಷಕ್ಕೆ ಸಂದಾಯ ಮಾಡಬೇಕಾಗಿರುವ ಬೋನಸ್, ಮಾಸಿಕ ಸಂಬಳ/ಮಜೂರಿ ₹21,000/- ಮೀರದಂತೆ ಪಡೆಯುತ್ತಿರುವ (ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್, 1965 (ಪರಿಷ್ಕೃತ) ರಲ್ಲಿ ವ್ಯಾಖ್ಯಾನಿಸಿರುವಂತೆ) ನೌಕರರಿಗೆ ಮಾತ್ರ ಅನ್ವಯಿಸುತ್ತದೆ.

2. 2020-21 ನೇ ಹಣಕಾಸು ವರ್ಷಕ್ಕೆ ಸಂದಾಯ ಮಾಡಬೇಕಾಗಿರುವ ಅನುಗ್ರಹ ಪೂರ್ವಕ (ಎಕ್ಸ್‌ಗ್ರೇಷಿಯಾ) ಮಾಸಿಕ ₹21,000/- ಮತ್ತು ಅದಕ್ಕಿಂತಲೂ ಹೆಚ್ಚು (ಪೇಮೆಂಟ್ ಆಫ್ ಆ್ಯಕ್ಟ್, 1965 (ಪರಿಷ್ಕೃತ) ರಲ್ಲಿ ವ್ಯಾಖ್ಯಾನಿಸಿರುವಂತೆ) ಸಂಬಳವನ್ನು ಪಡೆಯುತ್ತಿರುವ ನೌಕರರಿಗೆ ಮಾತ್ರ ಅನ್ವಯಿಸುತ್ತದೆ.

3. ನೌಕರರ ಸಂಬಳ/ಮಜೂರಿ, ಮಾಸಿಕ ₹7,000/- ಮೀರಿದರೆ, ಅಂತಹವರಿಗೆ ಬೋನಸ್ಸನ್ನು ಸಂದಾಯ ಮಾಡಲು ಲೆಕ್ಕಿಸುವಾಗ ಅವರ ಸಂಬಳ/ಮಜೂರಿ ಮಾಸಿಕ ₹7,000/-(ರೂಪಾಯಿ ಏಳು ಸಾವಿರಗಳು ಮಾತ್ರ) ಅಥವಾ ಉದ್ಯೋಗ ಅನುಸೂಚಿತ ಅಡಿಯಲ್ಲಿ ಸರ್ಕಾರದ ಸಕ್ಷಮ ಪ್ರಾಧಿಕಾರವು ನಿಗಧಿಪಡಿಸಿರುವ ಕನಿಷ್ಟ ಮಜೂರಿ ಇದರಲ್ಲಿ ಯಾವುದು ಹೆಚ್ಚಳವೋ ಅದನ್ನು ಪರಿಗಣಿಸತಕ್ಕದ್ದು.

4. ಮಾಸಿಕ ₹21,000/- ಮತ್ತು ಅದಕ್ಕಿಂತಲೂ ಹೆಚ್ಚು (ಪೇಮೆಂಟ್ ಆಫ್ ಆ್ಯಕ್ಟ್, 1965 (ಪರಿಷ್ಕೃತ) ರಲ್ಲಿ ವ್ಯಾಖ್ಯಾನಿಸಿರುವಂತೆ) ಸಂಬಳವನ್ನು ಪಡೆಯುತ್ತಿರುವ ನಿಗಮದ ನೌಕರರಿಗೆ ಹಾಗೂ ನಿಗಮ/ಎಸ್ಕಾಂಗಳಲ್ಲಿ ನಿಯೋಜನೆಯ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಅನುಗ್ರಹ ಪೂರ್ವಕ (ಎಕ್ಸ್‌ಗ್ರೇಷಿಯಾ) ರೂಪದಲ್ಲಿ ಸಂದಾಯ ಮಾಡಲು ನೌಕರರಿಗೆ 2020-21 ನೇ ಹಣಕಾಸು ವರ್ಷದಲ್ಲಿ ಅವರು ಗಳಿಸಿರುವ ಸಂಬಳದ 1/12 ನೇ ಭಾಗದಷ್ಟು, (ಶೇ.8.33) ₹7,000/- (ರೂಪಾಯಿ ಏಳು ಸಾವಿರಗಳು ಮಾತ್ರ) ಅನ್ನು ಮೀರದಂತೆ ಪರಿಗಣಿಸತಕ್ಕದ್ದು.

5. ಬೋನಸ್/ಅನುಗ್ರಹ ಪೂರ್ವಕಕ್ಕೆ ಅರ್ಹರಾಗಲು ನೌಕರರು 2020-21 ನೇ ಹಣಕಾಸು ವರ್ಷದಲ್ಲಿ 30 ಕೆಲಸದ ದಿನಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು.

6. ನಿಗಮದ/ಎಸ್ಕಾಂಗಳ ಆವರಣದಲ್ಲಿ ವಂಚನೆ, ಮೋಸ ಅಥವಾ ದೊಂಬಿ, ಗಲಭೆ, ಗೊಂದಲ ಅಥವಾ ಹಿಂಸೆಯ ನಡವಳಿಕೆ ಹಾಗೂ ನಿಗಮದ/ಕಂಪನಿಗಳ ಆಸ್ತಿಯನ್ನು ಕಳವು, ದುರುಪಯೋಗ ಮಾಡಿರುವ ಅಥವಾ ವಿಧ್ವಂಸಕ ಕೃತ್ಯಗಳನ್ನು ನಡೆಸಿರುವ ಆರೋಪದ ಮೇಲೆ ಸೇವೆಯಿಂದ ಪದಚ್ಯುತಿ/ವಜಾಗೊಂಡಿರುವಂತಹ ನೌಕರರು ಬೋನಸ್/ಅನುಗ್ರಹ ಪೂರ್ವಕವನ್ನು ಪಡೆಯಲು ಅನರ್ಹರಾಗಿರುತ್ತಾರೆ.

7. ನಿಗಮ/ಎಸ್ಕಾಂಗಳಲ್ಲಿ ನಿಯೋಜನೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರಿಗೂ 2020-21 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಸಂದಾಯ ಮಾಡಲು ನಿಗಮವು ಅನುಮೋದಿಸಿದೆ.

8. ಬೋನಸ್/ ಅನುಗ್ರಹ ಪೂರ್ವಕ ಪಾವತಿ ಮಾಡಲು ಮೇಲೆ ತಿಳಿಸಿರುವ 2, 3, 4, 5 ಮತ್ತು 6 ರಲ್ಲಿನ ಷರತ್ತುಗಳಿಗೊಳಪಟ್ಟು ಹಾಗೂ ಬೋನಸ್/ಅನುಗ್ರಹ ಪೂರ್ವಕ ಸಂದಾಯ ಮಾಡಲು ಲೆಕ್ಕಿಸುವಾಗ ನೌಕರರ ಸಂಬಳವನ್ನು ಮಾಸಿಕ ₹7,000/- ಕ್ಕೆ ಮಿತಿಗೊಳಿಸತಕ್ಕದ್ದು.

9. ನಿಗಮ/ಎಸ್ಕಾಂಗಳಲ್ಲಿ ತರಬೇತಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಮಾರ್ಗದಾಳು/ ಕಿರಿಯ ಸ್ಟೇಷನ್ ಪರಿಚಾರಕ, ಪ್ರೊಬೇಷನರಿ ಮಜ್ದೂರುಗಳು, ಗ್ಯಾಂಗ್‌ಮೆನ್ ಹಾಗೂ ಅರೆಕಾಲಿಕ ಶುಚಿಗಾರರು 2020-21ನೇ ಹಣಕಾಸು ವರ್ಷದಲ್ಲಿ ಗಳಿಸಿರುವ ಮಜೂರಿ 1/12 ನೇ ಭಾಗ(ಶೇ.8.33) ಅಥವಾ ₹7000/- (ರೂಪಾಯಿ ಏಳು ಸಾವಿರ ಮಾತ್ರ) ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟನ್ನು ಬೋನಸ್ ರೂಪದಲ್ಲಿ ಸಂದಾಯ ಮಾಡಲು ನಿಗಮವು ಅನುಮೋದಿಸಿದೆ.

10. ಮೇಲಿನ ಕಂಡಿಕೆ 3, 4, 5 ಹಾಗೂ 6 ರಲ್ಲಿ ತಿಳಿಸಿರುವ ಷರತ್ತುಗಳಿಗೊಳಪಟ್ಟು, ಬೋನಸ್/ಅನುಗ್ರಹ ಪೂರ್ವಕ ಸಂದಾಯ ಮಾಡಲು ಲೆಕ್ಕಿಸುವಾಗ ಸದರಿಯವರುಗಳ ಮಜೂರಿಯನ್ನು ಮಾಸಿಕ ₹7,000/- ಕ್ಕೆ ಮಿತಿಗೊಳಿಸತಕ್ಕದ್ದು.

11. ಹೊರಗಿನ ಏಜನ್ಸಿ ಮೂಲಕ ನಿಗಮ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಬೋನಸ್/ಅನುಗ್ರಹ ಪೂರ್ವಕಕ್ಕೆ ಅರ್ಹರಿರುವುದಿಲ್ಲ.

12. ಬೋನಸ್/ಅನುಗ್ರಹ ಪೂರ್ವಕವನ್ನು ನಗದಾಗಿ ಪಾವತಿಸುವುದು.

ಬೋನಸ್/ಅನುಗ್ರಹ ಪೂರ್ವಕವನ್ನು ದಿನಾಂಕ: 10.09.2021 ರಂದು ಆಚರಿಸಲ್ಪಡುವ ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ ಬಟವಾಡೆ ಮಾಡತಕ್ಕದ್ದು.

"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ"

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

**ಮೆಮೋ**

ಕ್ರಮಾಂಕ:ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/21-22/ Cys-795 ದಿನಾಂಕ: 06 SEP 2021

ಚಾವಿಸನಿನಿಯ ನೌಕರರು ಹಾಗೂ 2020-21ನೇ ಸಾಲಿನಲ್ಲಿ ನಿವೃತ್ತಿಯಾದ ನೌಕರರಿಗೆ, 2020-21ನೇ ಹಣಕಾಸು ವರ್ಷದಲ್ಲಿ ಗಳಿಸಿರುವ ಸಂಬಳ/ಮಜೂರಿಯ (ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್, 1965ರಲ್ಲಿ ವ್ಯಾಖ್ಯಾನಿಸಿರುವಂತೆ) 1/12ನೇ ಭಾಗ (ಶೇ.8.33) ಅಥವಾ ರೂ.100/-(ರೂಪಾಯಿ ಒಂದು ನೂರು ಮಾತ್ರ) ಇವೆರಡರ

ಯಾವುದೇ ಹೆಚ್ಚೋ, ಅಷ್ಟನ್ನು ರೂ.7,000/-ಗಳ ಮಿತಿಗೊಳಪಟ್ಟು ಬೋನಸ್ ರೂಪದಲ್ಲಿ ಪಾವತಿ ಮಾಡುವ ಕುರಿತು ನಿರ್ದೇಶಕರು(ಆ ಮತ್ತು ಮಾ.ಸಂ.), ಕವಿಪ್ರನಿನಿ., ಬೆಂಗಳೂರುರವರು ಹೊರಡಿಸಿರುವ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/5608/2000-2001 ದಿನಾಂಕ:04.09.2021ರ ಆದೇಶವನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

Renuka 6/9/21

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

ಪ್ರತಿಗಳು:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗು ಅಗತ್ಯ ಕ್ರಮಕ್ಕಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ಚಾವಿಸನಿನಿ., ನಿಗಮ ಕಾರ್ಯಾಲಯ, ಮೈಸೂರು ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
- ಆ.ಕಾ-ವ್ಯ.ನಿ/ನಿ(ತಾಂ)/ಮು.ಆ.ಅ
- ಸ-2(ಆ ಮತ್ತು ಮಾ.ಸಂ)/ಪ್ರ.ಕ.